(SRI T. CHANNIAH.)

No.	Article	Rate quoted by the accepted tenderer. Rs. a. p.
43	Thread buttons—Doz. ..	0 1 0
44	Table salt (I lb. pkts.) "Standard Salt"—No.	0 1 0
45	Country baskets (Bamboo) 26" dia. ..	0 1 0
46	Bamboo poles ..	0 1 0
47	Locks Aligarh of sizes ..	0 1 0
48	Kerosene oil white tin of 24 bottles (empty tins returnable) ..	0 1 0
49	Aluminium plates, 10"—12" diameter ..	0 1 0
50	Aluminium mugs one pint measure	0 1 0

COUNTRY MEDICINE.

1	Alum—Lb. ..	0 1 0
2	Ammonium chloride—Lb. ..	1 0 0
3	Arabic gum (white superior quality)—Lb. ..	1 0 0
4	Borax—Lb. ..	0 1 0
5	Camphor—Lb. ..	1 0 0
6	Cocoanut oil—Lb. ..	1 0 0
7	Potas Nitras—Lb.	1 0 0
8	Sulphate of copper Lb. ..	0 1 0
9	Sulphur, Country	
10	Phenyle best brand gallon tin (6 bottles) "Hg-Q" Disinfectant (Emulsion) — No. ..	2 0 0

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಟೆಂಡರಿನಲ್ಲಿ ಈ ವರ್ಷ ಸಾಮಾನುಗಳನ್ನು ಕೊಡುತ್ತೇವೆಂದು ಹೇಳಿದ್ದಾರಲ್ಲಾ, ನೀವು ಟೆಂಡರು ಕರೆಯುವಾಗ ಪ್ರತಿಯೊಂದು ಸಾಮಾನನ್ನು ಅಂದಾಜಾಗಿ ಇಷ್ಟಿಷ್ಟೇ ಸಾಮಾನುಗಳನ್ನು ಕೊಡಬೇಕೆಂದು ನಮೂದುಮಾಡಿರುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಪರಿಷ್ಪಡಲ್ಲಿ ತಿಳಿಸಿದ್ದೇವೆ; ಯಾವ ಯಾವ ಸಾಮಾನುಗಳನ್ನು ಯಾವ ಯಾವ ದರಕ್ಕೆ ಕೊಡುತ್ತೇವೆಂದು ಟೆಂಡರು ಕೊಡುತ್ತಾರೆ. ಅದೇ ಪ್ರಕಾರ ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಟೆಂಡರ್‌ಗಳನ್ನು ಒಪ್ಪಿಕೊಳ್ಳುವವರು ಯಾರು ? ಇಲ್ಲಿ ಸರ್ಕಾರದವರು ಎಂದು ಹೇಳಿದ್ದೀರಿ ; ಯಾವ ಸರ್ಕಾರಿ ಆಫೀಸರು ?

ಅಧ್ಯಕ್ಷರು.—ಸರ್ಕಾರದವರು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಕೊನೆಯ ಪ್ರಶ್ನೆಯಲ್ಲಿ 'clerical error' ಇದ್ದರೆ ಬದರಾಯಿಸುತ್ತೇವೆಂದು ಹೇಳಿದ್ದೀರಿ. ಗುಮಾಸ್ತರುಗಳು ದರಗಳು ಬಂದಿರುವುದನ್ನು ಸರಿಯಾಗಿ ನೋಡುವುದಿಲ್ಲವೇ ?

ಶ್ರೀ ಟಿ. ಚನ್ನಯ್ಯ.— ಕೆಲವುವೇಳೆ clerical error ಆಗುತ್ತದೆ. ಅದಕ್ಕಾಗಿಯೇ ತಿದ್ದುಪಡಿಮಾಡಿ accept ಮಾಡಿಕೊಂಡಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಇಲ್ಲಿ 50–60 ಸಾಮಾನುಗಳ ಪಟ್ಟಿಯನ್ನು ಕೊಟ್ಟು ಅವುಗಳನ್ನು ಸರಬರಾಯಿ ಮಾಡುವ ದರವನ್ನು ತಿಳಿಸಿದೆ. ಮಂಡ್ಯದ ಸಕ್ಕರೆಯನ್ನು ಪೀಸೆಗೆ 4 ಆಣೆಯಂತೆ ಕೊಡುತ್ತೇವೆಂದು ಹೇಳಿದ್ದಾರೆ, ನೀವೂ ಒಪ್ಪಿದ್ದೀರಿ. ಮಂಡ್ಯ ಸಕ್ಕರೆ ಎಷ್ಟಾದರೂ ಆ ರೀತಿ ಸಿಕ್ಕುತ್ತದೆಯೇ ?

Mr. SPEAKER.—There are many other considerations for accepting a tender. It comes under detailed administration.

Sri S. R. NAGAPPA SETTY.—The point is, if the quality of articles is understood by the rates, Coffee powder is supplied at Rs. 3-8-0 per lb. It is a controlled commodity. Can you supply that quality of butter, coffee powder, milk—all these materials ?

ಶ್ರೀ ಟಿ. ಚನ್ನಯ್ಯ.—ಅವರು ಟೆಂಡರಿನಲ್ಲಿ ಯಾವ ದರದಂತೆ ಸರಬರಾಯಿ ಮಾಡುತ್ತೇವೆಂದು ನಮೂದಿಸಿದ್ದಾರೋ ಆ ಪ್ರಕಾರವೇ ಮಾಡುತ್ತಾರೆ. ಹಾಗೆ ಮಾಡಲು ಒಪ್ಪಿದರೇನೇ ನಾವು ಅವರ ಟೆಂಡರನ್ನು ಅಂಗೀಕರಿಸುವುದು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಸರಿಯಾದ quality ಪದಾರ್ಥಗಳನ್ನು ಕೊಡುತ್ತಾರೆಂಬ ನಂಬಿಕೆಯಿದೆಯೇ ತಮಗೆ ?

ಶ್ರೀ ಟಿ. ಚನ್ನಯ್ಯ.—ಸರಿಯಾದ quality ಪದಾರ್ಥಗಳನ್ನು ಸರಬರಾಯಿ ಮಾಡಬೇಕೆಂಬುದು ಟೆಂಡರಿನ ಒಂದು ಮುಖ್ಯ ಪರತ್ತು.

Extending Prohibition in the State.

9 A.M.

Q.—551. Sri H. T. PUTTAPPA (Hoskote-Anekal-Scheduled Castes).—Will the Government be pleased to furnish the answer to Question No. 383 relating to extension of prohibition put

at the last session of the Assembly to which Government answered that the answer would be furnished after receiving the opinion of the Committee formed by the Central Government?

Sri T. CHANNIAH (Minister for Public Health and Local Self-Government).—It is not possible to fix any date on which Prohibition could be extended to the remaining Districts of the State.

ಶ್ರೀ ಎಚ್. ಟಿ. ಪುಟ್ಟಪ್ಪ.—ಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತರುವ ಉದ್ದೇಶ ಸರ್ಕಾರಕ್ಕೆ ಇದೆಯೋ ಇಲ್ಲವೊ?

ಶ್ರೀ ಟಿ. ಚನ್ನಯ್ಯ.—ಇದೆ. ಆದರೆ ಎರಡು ಕಾರಣಗಳಿಂದ ಅದನ್ನು ತಕ್ಷಣ ವಿಸ್ತಾರಗೊಳಿಸುವುದು ಸಾಧ್ಯವಿಲ್ಲವೆಂದು ನಾನು ಆಗಲೇ ತಿಳಿಸಿದ್ದೇನೆ. ಪಾನನಿರೋಧ ಯಶಸ್ವಿಯಾಗಬೇಕಾದರೆ ಮುಖ್ಯವಾಗಿ ನೈತಿಕ ವಾತಾವರಣ ಬೆಳೆಯಬೇಕಾದುದು ಅತ್ಯಾವಶ್ಯಕ, ಸಾರ್ವಜನಿಕರೂ ಸಹಕಾರ ನೀಡಬೇಕಾದುದು ಅತ್ಯಗತ್ಯ ಅವರಿಂದ ಪಾನನಿರೋಧದ ಬಗ್ಗೆ ಒತ್ತಾಯ ಬೇಕು. ಎರಡನೆಯದು, ಸರ್ಕಾರದ ನಧ್ಯದ ಹಣ ಕಾಸಿನ ಕಷ್ಟಪರಿಸ್ಥಿತಿಯಲ್ಲಿ ಪೂರ್ಣ ಪಾನನಿರೋಧವನ್ನು ಜಾರಿಗೆ ತರಲು ಸಾಧ್ಯವಿಲ್ಲವಾಗಿದೆ.

———

Vacancies of First Division Clerks in the Medical Department.

Q.—684. Sri G. PUTTASWAMY (Chikmagalur-Mudigere— Scheduled Castes).—

Will the Government be pleased to state:—

(*a*) whether they have issued orders requiring I Division clerical vacancies occurring in the Medical Department to be filled up only by candidates appointed by the Public Service Commission;

(*b*) whether they will think of reserving a few of the 1st Division vacancies that may occur in the Department for being filled up by the concerned unit officers themselves by promoting thereto officials who are working in the department and who have put in sufficient service?

A.—Sri T. CHANNIAH (Minister for Public Health and Local Self-Government).—

(*a*) No.

(*b*) The rules in force are being followed in regard to the classification of vacancies into promotional and direct recruitment vacancies.

ಶ್ರೀ ಜಿ. ಪುಟ್ಟಸ್ವಾಮಿ.—ಈ ಇಲಾಖೆಯಲ್ಲಿರತಕ್ಕ ಮೊದಲನೆಯ ದರ್ಜೆ ಗುಮಾಸ್ತೆ ಕೆಲಸಗಳನ್ನು ಪದವೀಧರರಿಗೆ ಮಾತ್ರ ಕೊಡಬೇಕೆಂದು ಆಜ್ಞೆ ಮಾಡಿದ್ದೀರಾ?

ಶ್ರೀ ಟಿ. ಚನ್ನಯ್ಯ.—ಆ ರೀತಿ ಆಜ್ಞೆ ಮಾಡಿಲ್ಲವೆಂದು ಉತ್ತರದಲ್ಲಿಯೇ ತಿಳಿಸಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಪದವೀಧರರಿಗೆ ಎಂದು ಉತ್ತರದಲ್ಲಿ ಕೊಟ್ಟಿಲ್ಲ. ಅವರಿಗೆ ಮಾತ್ರ ಮೊದಲನೆಯ ದರ್ಜೆ ಕೆಲಸಗಳಿಗೆ ಪ್ರಮೋಷನ್ ಕೊಡಬೇಕೆಂದು ಮಾಡಿದ್ದೀರಾ?

ಶ್ರೀ ಟಿ. ಚನ್ನಯ್ಯ.—ಇದನ್ನೆಲ್ಲಾ ಪಬ್ಲಿಕ್ ಸರ್ವಿಸ್ ಕಮಿಷನ್ ರೂಲ್ಸ್ ಅನುಸರಿಸಿ ಮಾಡಲಾಗುತ್ತಿದೆ. ಸಾಮಾನ್ಯವಾಗಿ ಸ್ಥಾನಗಳು ಖಾಲಿ ಬಿದ್ದರೆ, ಅವುಗಳಲ್ಲಿ ಕೆಲವಕ್ಕೆ ನೇರವಾಗಿ ರಿಕ್ರೂಟ್ ಮಾಡಲಾಗುತ್ತಿದೆ ಮತ್ತು ಕೆಲವನ್ನು ಕೆಳದರ್ಜೆಯಿಂದ ಪ್ರಮೋಷನ್ ಮಾಡುವುದರ ಮೂಲಕ ಭರ್ತಿ ಮಾಡಲಾಗುತ್ತಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಎ ಮತ್ತು ಬಿ ಕ್ಲಾಸ್ ಸ್ಥಾನಗಳಲ್ಲಿ ಪ್ರಮೋಷನ್ ವೇಕೆನ್ಸಿಗಳಿವೆಯೋ ಇಲ್ಲವೊ?

ಶ್ರೀ ಟಿ. ಚನ್ನಯ್ಯ.—ಇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಬಿ. ವೇಕೆನ್ಸಿಗಳನ್ನು ಪದವೀಧರರಿಗಲ್ಲದೆ ನಿಮ್ಮ ವರ್ಗದವರಿಗೆ ಫಸ್ಟ್ ಪ್ರಿಫರೆನ್ಸ್ ಕೊಡಬೇಕೆಂಬುದನ್ನು ಪರಿಶೀಲನೆ ಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಪರಿಶೀಲನೆ ಮಾಡುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಎರಡನೆಯ ದರ್ಜೆಯಲ್ಲಿರುವ ಪದವೀಧರರಲ್ಲದವರಿಗೆ ಮೊದಲನೆಯ ದರ್ಜೆ ಕೆಲಸವನ್ನು ದೊರಕಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಇದೆಲ್ಲವನ್ನೂ ಪಬ್ಲಿಕ್ ಸರ್ವಿಸ್ ಕಮಿಷನ್ ರೂಲ್ಸ್ ಅನುಸರಿಸಿ ಮಾಡುತ್ತೇವೆ.

———

Appointment of Textile Graduates in Civil Departments.

Q.—211. Sri M. CHIKKALINGIAH (Malavalli—Scheduled Castes).—

Will the Government be pleased to state:—

(*a*) whether it has come to their notice that one of the candidates selected for the post of Assistant Sales Tax Officer in 1951 is a Textile Graduate:

(*b*) whether Textile Degree is recognized by them and the Public Service Commission for appointments in all Civil Departments;

(*c*) if not the circumstances that led for the appointment of the above candidate?

A.—Sri KADIDAL MANJAPPA (Minister for Revenue and Public Works).—

(*a*) Yes.

(*b*) Yes.

(*c*) Does not arise in view of answer to (b).